ಅಭಿಮತ
ಎಸ್.ಜಿ. ಹೆಗಡೆ,
shiheg@gmail.com

ಕರೋನಾ ಬಂಧನದಿಂದ ಮುಕ್ತಿ ಯಾವಾಗ?

ಕರೋನಾದ ಕುರಿತು ಇಷ್ಟೆಲ್ಲ ಭಯ ಭೀತಿ ಏಕೆ. ಜಗತ್ತು ಹಲವಾರು ವೈರಸ್ ಪೀಡೆಯನ್ನು ಯಶಸ್ವಿಯಾಗಿ ಎದುರಿಸಿಲ್ಲವೇ ಅನ್ನುವ ಪ್ರಶ್ನೆ ಬಹು ಜನರಲ್ಲಿದೆ. ಮತ್ತು ಇದು ಸ್ವಾಭಾವಿಕವಾಗಿದೆ. ಕೆಲ ವರ್ಷಗಳಿಂದ ನಾನಾ ವೈರಸ್‌ಗಳ ಮೂಲಕ ವಿಪರೀತ ಸಮಸ್ಯೆಗಳನ್ನು ಈಗಾಗಲೇ ಈ ದೇಶ ಅನುಭವಿಸಿ ಆಗಿದೆ.

ಪ್ರಧಾನ ಮಂತ್ರಿಯವರು ಕರೆ ನೀಡಿದ್ದ ಜನತಾ ಕರ್ಫ್ಯೂ ಸಾಕಷ್ಟು ಯಶಸ್ವಿಯಾಗಿದೆ. ಅಂದರೆ ನೂರು ಕೋಟಿಗಿಂತ ಹೆಚ್ಚು ಭಾರತೀಯರು ತಮ್ಮನ್ನು ಒಂದು ರೀತಿಯ ಗೃಹ ಬಂಧನದಲ್ಲಿ ಉಳಿದಿದ್ದಾರೆ. ಇಷ್ಟೆಲ್ಲ ಜನರು ಮನೆಯಲ್ಲಿ ಹೀಗೆ ಉಳಿದಿದ್ದು ಇದೇ ಮೊದಲು. ಅಮೆರಿಕದಲ್ಲಿ ಸುಮಾರು 80 ಮಿಲಿಯನ್‌ಗೂ ಅಧಿಕ ಜನರು ಪ್ರತಿದಿನ ಹೀಗೆ ಮನೆಯಲ್ಲಿ ಉಳಿದಿರುವ ಕುರಿತು ತಿಳಿದಿದೆ. ಕಳೆದ ಕೆಲ ವಾರಗಳಿಂದ ಜಾಗತಿಕವಾಗಿ ಸ್ವ-ಸೆರೆ ಸೇರಿಕೊಂಡಿರುವ ಜನಸಂಖ್ಯೆ ಸಹಸ್ರ ಕೋಟಿಗೂ ಮಿಕ್ಕಿರಬಹುದು. ಮಾರ್ಚ್ 31ರ ತನಕ ಲಾಕ್ ಡೌನ್ ಅವಧಿ ಮುಂದುವರಿಯಲಿದ್ದು ಹಲವಾರು ಪ್ರದೇಶಗಳಲ್ಲಿ ಸಂಚಾರ ಪೂರ್ತಿ ಸ್ಥಗಿತವಾಗಿದೆ. ಅಲ್ಲದೇ ಸೆಕ್ಷನ್ 144 ಕೂಡ ಜಾರಿಯಾಗಲಿದೆ.



ಅಂದರೆ ಬರುವ ದಿನಗಳಲ್ಲಿ ಇನ್ನೂ ಅಸಂಖ್ಯಾತ ಜನತೆ ಸ್ವಯಂ ಪ್ರೇರಿತ ಬಂಧನ ಸ್ವೀಕರಿಸಲಿದ್ದಾರೆ. ಇದೊಂದು ನಿಜವಾದ ಅಭೂತಪೂರ್ವ ಸಂದರ್ಭ. ಊಹೆಗೂ ನಿಲುಕದ ಅಚ್ಚರಿಯ ಸಮಯ. ಯಾವುದೇ ಸರ್ವಾಧಿಕಾರ ಇಂತಹ ಗೃಹ ಬಂಧನವನ್ನು ನಿರ್ಮಿಸಲಾಗದು. ಐತಿಹಾಸಿಕವಾಗಿ ಈ ಪ್ರಕಾರದ ಭಾರೀ ಬಂಧನ ಎಂದೂ ನಡೆದಿಲ್ಲ, ಕೇಳಿದ್ದಿಲ್ಲ, ಊಹಿಸಿದ್ದಿಲ್ಲ. ಇಂತಹ ಭಯಂಕರ ಸ್ಥಿತಿಯನ್ನು ಕಣ್ಣಿಗೆ ಕಾಣದ, ಸೂಕ್ಷ್ಮ ಜಂತು ಕರೋನಾ ನಿರ್ಮಾಣಮಾಡಿದೆ.

ಚೀನಾದಲ್ಲಿ ಇತ್ತೀಚೆಗೆ ಹೊಸ ಪ್ರಕರಣ ಸಂಖ್ಯೆ ಕಡಿಮೆಯಾದರೂ ಜಗತ್ತಿನ ಉಳಿದೆಲ್ಲೆಡೆ 'ಕರೋನಾ' ಸಾಂಕ್ರಾಮಿಕವಾಗಿ ಗಂಭೀರ ಹಂತ ತಲುಪಿದೆ . ಸ್ಪೇನ್ ದೇಶದ ಮೆಡ್ರಿಡ್ಡಿನ ಪೂರ್ವ ಅಧ್ಯಕ್ಷ ಲೋರೆಂಝೋ ಸಾಂಜ್ ಕರೋನಾ ವಿಷ ಜಂತುವಿನ ದಾಳಿಗೆ ಬಲಿಯಾದ ವಿಷಯ ತಿಳಿದಿದೆ. ಹಾಲಿವುಡ್ ಜೋಡಿ ಟಾಮ್ ಮತ್ತು ರೀಟಾಗೆ ಸೋಂಕು ತಗಲಿತ್ತು. ಕೆನಡಾ ಪ್ರಧಾನ ಮಂತ್ರಿಯ ಪತ್ನಿ ಕರೋನಾ ಪೀಡೆಗೆ ಸಿಲುಕಿದಳು. Hawaii five - o and lost ಖ್ಯಾತಿಯ ದಕ್ಷಿಣ ಕೊರಿಯಾ ಮೂಲದ ಅಮೆರಿಕನ್ ಆಕ್ಟರ್ ಡೇನಿಯಲ್ ಕಿಮ್ ಇನ್ಸ್ಟಾಗ್ರಾಮಿನಲ್ಲಿ ತಮಗೆ ತಗಲಿದ ಕರೋನಾ ಕುರಿತು ಹೇಳಿಕೊಂಡು ಕರೋನಾ ವೈರಸನ್ನು ಚೀನಾ ವೈರಸ್ ಅನ್ನುವವವರಿಗೆ ಕಿಡಿ ಕಾರಿದ್ದಾರೆ. ಬೇಬಿ ಡಾಲ್ ಹಾಡುಗಾರ್ತಿ ಕನ್ನಿಕಾ ಕಪೂರಿಗೆ ಕರೋನಾ ಸೇರಿಕೊಂಡಿದ್ದು ಬೆಳಕಿಗೆ ಬಂದಿದೆ. ಅಂದರೆ ಕರೋನಾ ತೆಕ್ಕೆಗೆ ಯಾರೂ ಸಿಲುಕಬಹುದಾಗಿದೆ. ಈ ತನಕ ಜಾಗತಿಕವಾಗಿ ಸುಮಾರು ಮೂರು ಲಕ್ಷಕ್ಕೂ ಹೆಚ್ಚು ಜನರು ಕರೋನಾ ಆಘಾತಕ್ಕೆ ಒಳಗಾಗಿದ್ದು ಹದಿಮೂರು ಸಾವಿರಕ್ಕಿಂತ ಹೆಚ್ಚು ಜನ ಸಾವಿಗೀಡಾಗಿದ್ದಾರೆ. ಪೀಡಿತರ ಸಂಖ್ಯೆಯ ಪಟ್ಟಿಯಲ್ಲಿ ಚೀನಾ ಮತ್ತು ಇಟಲಿ ಮೇಲಿದ್ದು ನಂತರ ಅಮೇರಿಕ, ಸ್ಪೇನ್, ಜರ್ಮನಿ, ಇರಾನ್ ಮುಂತಾದ ದೇಶಗಳು ಸೇರಿವೆ. ಕರೋನಾ ವೈರಸ್ ಈಗ ಜಗತ್ತಿನ ಎಲ್ಲ ಮೂಲದಲ್ಲೂ ಪಸರಿಸಿ, ಜಾಗತಿಕ ಭೀತಿ ಮೂಡಿಸಿದೆ. ಮಾರ್ಚ್ ಒಂಭತ್ತರಿಂದ ಕೆಲ ದಿನಗಳನ್ನು ನಾನು ಢಾಕಾದಲ್ಲಿ ಕಳೆಯುವುದಿತ್ತು. ಬಾಂಗ್ಲಾ ದೇಶದ ರಾಜಧಾನಿ ಢಾಕಾದಲ್ಲಿ ಹಲವು ಪ್ರತಿಷ್ಠಿತ ಔಷಧ ಕಂಪನಿಗಳು ವಿವಿಧ ಬಗೆಯ ಔಷಧ ತಯಾರಿಕೆಯಲ್ಲಿ ತೊಡಗಿವೆ. ಅವುಗಳಲ್ಲಿ ಎಸ್ಕಎಫ್ ಬಾಂಗ್ಲಾದೇಶ್, ರೆನಾಟಾ , ಅಕ್ಮೇ ಅಂತಹ ಸಂಸ್ಥೆಗಳೂ ಸೇರಿವೆ. ಬಾಂಗ್ಲಾಕ್ಕೆ ಚೀನಾ ಅಲ್ಲದೆ ಕೊರಿಯಾ ಹಾಗೂ ಅರಬ್ ದೇಶಗಳ ನಡುವೆ ವ್ಯಾಪಾರಿ ಸಂಪರ್ಕ ನಿಕಟವಾಗಿರುವುದರಿಂದ ಢಾಕಾಕ್ಕೆ ಈ ಸಮಯದಲ್ಲಿ ಪ್ರಯಾಣ ರದ್ದು ಮಾಡಿ ಭೇಟಿಯನ್ನು ಮುಂದೂಡಿದೆ. ಚೀನಾದಲ್ಲಿ ರಸಾಯನ ಮತ್ತು ಔಷಧ -2020ರ ಸಮಾವೇಶವು ಜೂನ್ 22ರಿಂದ 24ರ ತನಕ ನಿಯೋಜಿತವಾಗಿದ್ದು ಅಲ್ಲಿಯೂ ಭಾಗಿಯಾಗುವ ವಿಚಾರವು ಕರೋನಾ ಹಿನ್ನೆಲೆಯಲ್ಲಿ ಈಗ ಅನಿಶ್ಚಿತವಾಗಿದೆ. ಔಷಧ ಮತ್ತು ಅದರ ಮೂಲ ಪದಾರ್ಥಗಳ ತಯಾರಿಕೆಯಲ್ಲಿ ಚೀನಾ ದಿಗ್ಗಜ ದೇಶ. ಅಲ್ಲಿ ವೈರಸ್ ಟ್ರೀಟ್ಮೆಂಟಿನ ಆಧುನಿಕ ಔಷಧಗಳು ತಯಾರಿಕೆಯಲ್ಲಿವೆ. ಆದರೂ ಕರೋನಾ ಅಲ್ಲಿ ತೀವ್ರ ಸ್ವರೂಪ ಪಡೆದಿರುವುದು ವೈದ್ಯಕೀಯ ಮತ್ತು ಔಷಧ ಜಗತ್ತಿನಲ್ಲಿ ಸಾಕಷ್ಟು ಆತಂಕ ಮೂಡಿಸಿದ ಸಂಗತಿ.

> **ಮನುಷ್ಯ ಶಕ್ತಿಯಲ್ಲಿ ಪ್ರಚಂಡ ವಿಶ್ವಾಸವಿರುವ ಯುರೋಪ್, ಅಮೆರಿಕ, ಇಂಗ್ಲೆಂಡ್ ಮುಂತಾದ ಅಗ್ರಗಣ್ಯ ಮಿಲಿಟರಿ ಶಕ್ತಿಗಳು ಸಾವು ನೋವಿನಿಂದ ಎಚ್ಚೆತ್ತು ಇಂದು ಕ್ಷುಲ್ಲಕ, ಸೂಕ್ಷ್ಮ ಕರೋನಾ ವೈರಸ್ ಭೀತಿಯಲ್ಲಿ ಲಾಕ್ ಡೌನ್ ಮಾಡಿಕೊಂಡಿವೆ. ಕರೋನಾ ಕಾಣಿಸಿ ಕೊಂಡ ಮೂಲ ಹಂತದಲ್ಲಿಯೇ ಪೂರ್ತಿ ಯಾಗಿ ಸಾಮಾಜಿಕ ಸಂಪರ್ಕವನ್ನು ನಿರ್ಬಂಧ ಗೊಳಿಸಿದ್ದರೆ ಬಹುಷಃ ಇಷ್ಟೆಲ್ಲ ಗಂಭೀರ ಸ್ಥಿತಿ ಯು ಇಟಲಿ ಮತ್ತಿತರ ದೇಶಗಳಲ್ಲಿ ಬರುತ್ತಿರಲಿಲ್ಲವೇನೋ.**

ಕರೋನಾದ ಕುರಿತು ಇಷ್ಟೆಲ್ಲ ಭಯ ಭೀತಿ ಏಕೆ. ಜಗತ್ತು ಹಲವಾರು ವೈರಸ್ ಪೀಡೆಯನ್ನು ಯಶಸ್ವಿಯಾಗಿ ಎದುರಿಸಿಲ್ಲವೇ ಅನ್ನುವ ಪ್ರಶ್ನೆ ಬಹು ಜನರಲ್ಲಿದೆ ಮತ್ತು ಸ್ವಾಭಾವಿಕವಾಗಿದೆ. ಕೆಲ ವರ್ಷಗಳಿಂದ Ebola,chicken guniya swine flue , dengue ಇತ್ಯಾದಿ ವೈರಸ್ ಮೂಲಕ ವಿಪರೀತ ಪೀಡೆಗಳನ್ನು ಅನುಭವಿಸಿ ಆಗಿದೆ. ಅವೆಲ್ಲ ಜ್ವರಗಳ ರೂಪು ರೇಷೆ ಮೇಲ್ನೋಟಕ್ಕೆ ಅವೇ. ಆಹಾರ ಸೇರದಿರುವುದು, ಹೊಟ್ಟೆ ನೋವು, ಜ್ವರ, ವಾಂತಿ, ಭೇದಿ, ಶ್ವಾಸ ತೊಂದರೆ, ಮೂಳೆ ನೋವು ಹೀಗೆ . ಕರೋನಾ ವೈರಸ್ ಕಾಣಿಸಿಕೊಳ್ಳುವ ರೀತಿಯೂ ಹೆಚ್ಚು ಕಡಿಮೆ ಅವೇ. ಬಹಳ ರೀತಿಯ, ಬೇರೆ ಬೇರೆ ವೈರಸ್ ಬಾಧೆಗಳನ್ನು ಯಶಸ್ಸಿನಿಂದ ಮೆಟ್ಟಿ ನಿಂತ ಮನುಷ್ಯಜಗತ್ತು ಚೀನಾದಲ್ಲಿ ಆರಂಭವಾದ ಕರೋನಾ ಬಾಧೆಯನ್ನು ಅಷ್ಟೆಲ್ಲ ಗಂಭೀರವಾಗಿ ಪರಿಗಣಿಸಿರಲಿಲ್ಲ ಅಂದರೆ ತಪ್ಪಾಗದು. ಚೀನಾದಲ್ಲಿ ಶುರುವಾದ ಮೊದಲ ದಿನಗಳಲ್ಲಿ ಕರೋನಾ ಬಾಧೆಯನ್ನು ಚೈನೀಸ್ ವೈರಸ್ ಎಂದು ಲಘುವಾಗಿ ತಿಳಿದಿದ್ದಿದೆ. ಇಷ್ಟೊಂದು

ಭೂತಾಕಾರದಲ್ಲಿ ನಂತರ ಎಲ್ಲೆಡೆ ಕಾಣಿಸಿಕೊಳ್ಳಬಹುದೆಂದು ಊಹಿಸದಿದ್ದುದೇ ಬಹುಷಃ ಹಲವು ದೇಶಗಳು ಮಾಡಿದ ದೊಡ್ಡ ತಪ್ಪು. ಮನುಷ್ಯ ಶಕ್ತಿಯಲ್ಲಿ ಪ್ರಚಂಡ ವಿಶ್ವಾಸವಿರುವ ಯುರೋಪ್, ಅಮೆರಿಕ, ಇಂಗ್ಲೆಂಡ್ ಮುಂತಾದ ಅಗ್ರಗಣ್ಯ ಮಿಲಿಟರಿ ಶಕ್ತಿಗಳು ಸಾವು ನೋವಿನಿಂದ ಎಚ್ಚೆತ್ತು ಇಂದು ಕ್ಷುಲ್ಲಕ, ಸೂಕ್ಷ್ಮ ಕರೋನಾ ವೈರಸ್ ಭೀತಿಯಲ್ಲಿ ಲಾಕ್ ಡೌನ್ ಮಾಡಿಕೊಂಡಿವೆ. ಕರೋನಾ ಕಾಣಿಸಿಕೊಂಡ ಮೂಲ ಹಂತದಲ್ಲಿಯೇ ಪೂರ್ತಿಯಾಗಿ ಸಾಮಾಜಿಕ ಸಂಪರ್ಕವನ್ನು ನಿರ್ಬಂಧಗೊಳಿಸಿದ್ದರೆ ಬಹುಷಃ ಇಷ್ಟೆಲ್ಲ ಗಂಭೀರ ಸ್ಥಿತಿಯು ಇಟಲಿ ಮತ್ತಿತರ ದೇಶಗಳಲ್ಲಿ ಬರುತ್ತಿರಲಿಲ್ಲವೇನೋ. ಈ ಕುರಿತು ಬೇರೆ ಬೇರೆ ದೇಶಗಳು ಸ್ವತಃ ಅಭಿಪ್ರಾಯ ನೀಡಿರುವುದು ಅಲ್ಲಲ್ಲಿ ವ್ಯಕ್ತವಾಗಿದೆ.

ಕರೋನಾ ನಮ್ಮ ದೇಶದಲ್ಲಿ ತಗಲಿರುವುದು ಚೀನಾ, ಯುರೋಪ್, ಇರಾನ್, ಇಸ್ರೇಲ್ ಮುಂತಾದ ದೇಶಗಳಲ್ಲಿ ಉಗ್ರ ರೂಪ ತಳೆದ ನಂತರವೆಂದರೆ ತಪ್ಪಾಗಲಾರದು. ಒಟ್ಟಾರೆ ಮಾನವ ಜನಾಂಗದ ದುರ್ದೈವದ ಸಮಯದಲ್ಲಿ ಅದೇ ನಮ್ಮ ಸುದೈವವೆನ್ನಬಹುದು. ಅಂದರೆ ನಮ್ಮೆದುರು ಅನುಭವಗಳಿವೆ, ಮಾದರಿಯಿದೆ. ಭಾರತ ಸರಕಾರ ಹಾಗೂ ರಾಜ್ಯ ಸರಕಾರಗಳು ಕರೋನಾ ಬಾಧೆಯನ್ನು ಮೂಲದಲ್ಲಿಯೇ ತೊಡೆದುಹಾಕುವ ದಿಟ್ಟ ಕ್ರಮ ಕೈಗೊಂಡಿವೆ. ಸಾಮಾಜಿಕ ಸಂಪರ್ಕಕ್ಕೆ ಕಡಿವಾಣ ಹಾಕಿದೆ. ಅಂತಹ ದಿಟ್ಟ ಕ್ರಮದಲ್ಲಿ ಹದಿನಾಲ್ಕು ಘಂಟೆಯ ಜನತಾ ಕರ್ಫ್ಯೂ ಮಹತ್ವದ ಹೆಜ್ಜೆ. ಅಂದರೆ ಹಿಂದಿನ ರಾತ್ರಿಯಿಂದ ಮಾರನೇ ದಿನ, ಅಂದರೆ ಸುಮಾರು ಮೂವತ್ತಾರು ಘಂಟೆಗಳ ಕಾಲ ಪೂರ್ತಿಯಾದ ಸಾಮಾಜಿಕ ಸಂಪರ್ಕ ನಿರ್ಬಂಧದಿಂದ ಕರೋನಾ ವೈರಸ್ ಸೈಕಲ್ಲನ್ನು ಬ್ರೇಕ್ ಮಾಡುವ ಪ್ಲಾನ್ ಇದಾಗಿದೆ. ದೇಶದ ಎಲ್ಲೆಡೆ ಮಾರ್ಚ್ ಕೊನೆಯ ತನಕ ಕರ್ಫ್ಯೂ ಮುಂದುವರಿಯಲಿದೆ. ದೇಶದಲ್ಲಿ ಹೆಚ್ಚು ಕೇಸ್ ಕಂಡುಬಂದ ಮಹಾರಾಷ್ಟ್ರದಲ್ಲಿ ಸರಕಾರವು ಕೈಗೊಂಡ ಹಲವಾರು ನಿರ್ಬಂಧ ಮತ್ತು ವೈದ್ಯಕೀಯ ಕ್ರಮಗಳು ಶ್ಲಾಘನೀಯವಾಗಿವೆ.

ಕರೋನಾ ಪೀಡೆಯ ಕುರಿತಂತೆ ಸ್ಪಷ್ಟವಾದ ಅಥವಾ ನಿಖರವಾದ ವೈದ್ಯಕೀಯ ಪರಿಹಾರದ ಕುರಿತು ಇರುವ ಸಂದಿಗ್ಧತೆ ಕುರಿತು ಎಲ್ಲೆಡೆ ಸಾಕಷ್ಟು ಪ್ರಚಾರವಿದ್ದು, ಈ ಕುರಿತು ಹೆಚ್ಚು ಹೇಳುವ ಅಗತ್ಯವಿಲ್ಲ. ಆದರೂ ಔಷಧ ತಯಾರಿಕೆ ಮತ್ತು ವ್ಯವಹಾರಗಳಲ್ಲಿ ಮೂರು ದಶಕಗಳಿಗಿಂತ ಹೆಚ್ಚು ಕೆಲಸಮಾಡಿರುವ, ಔಷಧ ಸಂಸ್ಥೆಯೊಂದರ ನಿರ್ದೇಶಕನಾಗಿರುವ ನಾನು ಜವಾಬ್ದಾರಿಯಿಂದ ಕೆಲವು ವಿಷಯ ಹೇಳಬೇಕಿದೆ. ಸಾಮಾನ್ಯವಾಗಿ ದೇಹದಲ್ಲಿ ವೈರಸ್ ಪ್ರವೇಶಿಸುವುದು ಪ್ರೊಟೀನ್ ಮೂಲದಿಂದ. ಆಯಾ ವೈರಸ್ಸಿನ ಪ್ರೊಟೀನ್ ಪ್ರವೇಶವನ್ನು ತಡೆಗಟ್ಟುವ ಅಥವಾ ಕಳಪೆ ಮಾಡುವ anti viral ಪ್ರಯೋಗ ಮಾಡಬೇಕಾಗುತ್ತದೆ. ಅಂತಹ ಅಧ್ಯಯನ ಮತ್ತು ನಿಖರ ಔಷಧ ಪ್ರಯೋಗ ಒಂದು ಸಂಕೀರ್ಣ ಮತ್ತು ಕ್ಲಿಷ್ಟ ಪ್ರಕ್ರಿಯೆ. ಕರೋನಾ ವೈರಸ್ ನಿರೋಧ ಮತ್ತು ನಿವಾರಣೆಯ ವಿಷಯದಲ್ಲಿ ಔಷಧ ಜಗತ್ತೇ ತೊಡಗಿಕೊಂಡಿದೆ. ಕ್ಲಿನಿಕಲ್ ಟ್ರಯಲ್ ಮುಗಿಸಿ ವ್ಯಾಕ್ಸಿನ್, ಔಷಧವನ್ನು ಕಾರ್ಯಗತಗೊಳಿಸುವುದು ದಿಗ್ಗಜ ಔಷಧ ಸಂಸ್ಥೆಗಳಿಗೆ ಪ್ರತಿಷ್ಠೆಯ ಕಣವಾಗಿದೆ. ಈ ನಿಟ್ಟಿನಲ್ಲಿ remdesivir ಪ್ರಯೋಗಾಲಯದಲ್ಲಿ spotlight ಪಡೆದಿದ್ದು ಊಚಿಡಜಿಟಜ್ಚಿಚಡಜ್ಚಿ ಕೂಡ ಗಣನೆಯಲ್ಲಿದೆ. ಸಾಮಾನ್ಯ ವೈರಸ್ ಸೆಣಸುವಲ್ಲಿ ಆಗಲೇ ಪ್ರಯೋಗದಲ್ಲಿರುವ hydroxi chloroquine ಪರಿಗಣನೆಗೆ ICMR ಸೂಚಿಸಿದೆ. ಅಂದರೆ ಕರೋನಾ ಸೆಣಸುವ ನಿಖರ ನಿರೋಧ ಮತ್ತು ನಿವಾರಣಾ ಔಷಧಗಳು ಇನ್ನೂ ಪ್ರಯೋಗ ಶಾಲೆಯಲ್ಲಿವೆ. ಇಂದಿನ ಸ್ಥಿತಿಯಲ್ಲಿ ರೋಗಿಯ ಸ್ಥಿತಿ ಪರಿಗಣಿಸಿ ಲಭ್ಯವಿರುವ ಔಷಧಗಳನ್ನು ಸ್ಥಿತಿಗತಿಗೆ ತಕ್ಕಂತೆ ನೀಡುತ್ತಿದ್ದಾರೆ.

ಅದೇ ಕಾರಣದಿಂದ ಕರೋನಾ ಪೀಡೆಯ ನಿಗೂಢತೆ ಅಭೂತಪೂರ್ವ ಸ್ಥಿತಿ ನಿರ್ಮಾಣ ಮಾಡಿದ್ದು ಮತ್ತು ಅಪಾರ ಜನಸಂಖ್ಯೆಯನ್ನು ಗೃಹ ಬಂಧನಕ್ಕೆ ನೂಕಿದೆ. ಈ ಮೊದಲು ಹೇಳಿದಂತೆ ಔಷಧ ತಯಾರಿಕೆಯಲ್ಲಿ ದಿಗ್ಗಜ ದೇಶವಾದ ಚೀನಾ ಕೂಡ ಔಷಧ ನಿಖರತೆಯ ಕೊರತೆಯಿಂದ ಚಡಪಡಿಸಿದೆ. ಕರೋನಾ ವೈರಸ್ ದಾಳಿಯು ವಿಜ್ಞಾನ ಮತ್ತು ವೈದ್ಯಕೀಯ ಜಗತ್ತಿನ ಎದುರು ಮುಂಬರುವ ಹೊಸ ಸವಾಲುಗಳ ಸೂಚಿಯೂ ಆಗಿದೆ. ಸದ್ಯ ತಿಳಿದಿರುವ ಮುಖ್ಯ ಕರೋನಾ ನಿರೋಧಕ ಮಾರ್ಗವೆಂದರೆ ಜನರು ಜನ ಸಂಪರ್ಕದಿಂದ ಹೊರತುಪಡಿಸಿ ತಮ್ಮನ್ನು ವೈರಸ್ ತಗಲಿದವರ ಸಂಪ ರ್ಕಕ್ಕೆ ಬಾರದಂತೆ ಐಸೋಲೇಟ್ ಮಾಡಿಕೊಳ್ಳುವುದಾಗಿದೆ.

ನಮ್ಮೆಲ್ಲರ ಎದುರಿಗಿರುವ ಮುಖ್ಯ ಪ್ರಶ್ನೆಯೆಂದರೆ ಕರೋನಾ ಮಹಾ ಮಾರಿ ನಿರ್ಮಿಸಿದ ಬಂಧನದಿಂದ ಬಿಡುಗಡೆ ಎಂದು ಹಾಗೂ ಕರೋನಾ ವೈರಸ್ಸಿನ ಸಂಪೂರ್ಣ ಶಮನ ಎಂದು ಎಂಬುದು. ಬಹುತೇಕ ಬಿಸಿ ವಾತಾವರಣವಿರುವ ನಮ್ಮ ದೇಶದಲ್ಲಿ ಕರೋನಾ ವೈರಸ್ ಬಹುದಿನ ಬಾಳಲಾರದು. ಆದರೆ ಅಂತಹ ಲಾಜಿಕ್ ವ್ಯತಿರಿಕ್ತವಾಗಿ ಇರಾನ್ ಮತ್ತು ಇಸ್ರೇಲ್ ಮುಂತಾದ ಕಡೆ ಕರೋನಾ ಸಾಕಷ್ಟು ತಾಂಡವವಾಡಿದೆ. ಈ ದೃಷ್ಟಿಯಿಂದ ಹಿಂದೆ ಕಂಡ ಎಲ್ಲ ವೈರಸ್ ಬೇನೆಗಿಂತ ಕರೋನಾ ಅಪಾಯಕಾರಿಯಾಗಿದೆ ಮತ್ತು ಸಾಂಕ್ರಾಮಿಕವಾಗಿದೆ. ಆರಂಭದ ಹಂತದಲ್ಲಿಯೇ ನಮ್ಮದೇಶದ ಆಡಳಿತ ವ್ಯವಸ್ಥೆ ಕೈಗೊಂಡ ನಿಖರ ಕ್ರಮಗಳಿಂದ ಕರೋನಾ ಬೇನೆಯು ಇನ್ನುಕೆಲವು ದಿನಗಳಲ್ಲಿ ಪ್ರಭಾವ ಕಳೆದುಕೊಳ್ಳಲಿದೆ. ಆದರೆ ಈ ನಿಟ್ಟಿನಲ್ಲಿ ಜನತೆಯ ಸಂಕಲ್ಪ, ಸಂಯಮ ಮತ್ತು ಸಹಕಾರ ಅತ್ಯವಶ್ಯ. ಇನ್ನು ಎರಡು ಅಥವಾ ಮೂರು ವಾರಗಳಲ್ಲಿ ಆಧುನಿಕ ಮಾನವ ಸಮಾಜದ ವಿರಾಟ್ ಶಕ್ತಿಯು ಕ್ಷುಲ್ಲಕ ಜಂತು ಕರೋನಾದ ಮೇಲೆ ಗೆಲುವು ಸಾಧಿಸಿ ಜನಜೀವನ ಮತ್ತು ವ್ಯವಹಾರಗಳು ಸಾಮಾನ್ಯ ಸ್ಥಿತಿಗೆ ಮರಳುವುದೆಂದು ಆಶಿಸೋಣ.

ಯುಗಾದಿ: ನವ ಚೈತನ್ಯಕ್ಕೆ ಹಾದಿ

ಅಭಿವ್ಯಕ್ತಿ
ರಾಜು. ಭೂಶೆಟ್ಟಿ
bhooshettiraj@gmail.com

ಯುಗಾದಿ ಎಂಬುದು ಪ್ರಕೃತಿಯ ಆಚರಣೆಯಾಗಲಿ, ಜತೆಗೆ ಪ್ರತಿಯೊಬ್ಬರ ಚೈತನ್ಯಕ್ಕೆ ಹಾದಿಯಾಗಲಿ. ಅಂದರೆ ಅಂದಿನ ದಿನ ಖಾಲಿ ಇರುವ ಜಾಗವನ್ನು ಗುರುತಿಸಿ ಒಂದಿಷ್ಟು ಗಿಡಗಳನ್ನು ಬೆಳೆಸೋಣ. ಪ್ರತಿ ವರ್ಷದ ಯುಗಾದಿಗೆ ಆ ಗಿಡಗಳ ಬೆಳವಣಿಗೆ, ಹಚ್ಚ ಹಸಿರನ್ನು ಕಣ್ತುಂಬಿಕೊಂಡು ಸಂತೋಷ ಪಡೋಣ. ನಮ್ಮ ಬಾಳು ಬೇವು- ಬೆಲ್ಲಗಳ ಮಿಶ್ರಣವೆಂಬುದನ್ನು ಅರಿತುಕೊಂಡು ಜೀವನದಲ್ಲಿ ಬರುವ ಸುಖ- ಸಂತೋಷಗಳನ್ನು ಸಮನಾಗಿ ಸ್ವೀಕರಿಸೋಣ. ಒಂದೆಡೆ ಪರಿಸರ ಕಾಪಾಡುವ ಪಣತೊಟ್ಟು , ಇನ್ನೊಂದೆಡೆ ನಮ್ಮ ವ್ಯಕ್ತಿತ್ವದ ಮೌಲ್ಯಗಳನ್ನು ಹೆಚ್ಚಿಸಿಕೊಳ್ಳಲು ಕೆಲವು ಸಂಕಲ್ಪಗಳನ್ನು ಅಳವಡಿಸಿಕೊಳ್ಳೋಣ.

ನಮ್ಮ ಜೀವನದ ಪ್ರತಿ ಹಂತದಲ್ಲೂ ಸಮಯ ಯಾವ ಯಾವ ಸಂದರ್ಭಗಳಲ್ಲಿ ವ್ಯರ್ಥವಾಗುತ್ತಿದೆ ಎಂಬುದನ್ನು ಚಿಂತನೆ ಮಾಡಿಕೊಂಡು, ಸಮಯದ ಸಂಪೂರ್ಣ ಸದ್ಬಳಕೆ ಮಾಡಿಕೊಳ್ಳುವತ್ತ ಗಮನ ಹರಿಸುವುದು. ಕೆಲಸವಿಲ್ಲದೇ ಸೋಮಾರಿಯಾಗಿ ಸಮಯ ಕಳೆದರೂ ಅದು ಕೂಡ ಕಳ್ಳತನ ಮಾಡಿದಂತೆ. ಎಲ್ಲವನ್ನು ನಾವೇ ಅನುಭವಿಸಿ ನೋಡುವಷ್ಟು ದೀರ್ಘವಾಗಿಲ್ಲ ಜೀವನ. ಆದ್ದರಿಂದ ಜೀವನದಲ್ಲಿ ಸಾಕಷ್ಟು ಏರಿಳಿತವನ್ನು ಕಂಡಿರುವ ಅನುಭವಗಳನ್ನು ಹೊಂದಿರುವವರಿಂದ ಕೆಲವು ಅಂಶಗಳನ್ನು ತಿಳಿದುಕೊಂಡು ಯಶಸ್ವಿ ಜೀವನ ಸಾಗಿಸುವತ್ತ ಮುನ್ನಡೆಯಬೇಕಾಗಿರುವುದು ಪ್ರತಿಯೊಬ್ಬರಿಗೂ ಅತ್ಯಗತ್ಯ. ಜೀವನದಲ್ಲಿ ಪರಸ್ಪರ ಪ್ರೀತಿ, ನಂಬಿಕೆ, ವಿಶ್ವಾಸಗಳು ಅತಿ ಮುಖ್ಯ. ಏಕೆಂದರೆ ಕಾಡುವ ಬಡತನ ನಾಳೆ ಹೋಗಬಹುದು, ಇಲ್ಲದ ಸಿರಿತನ ಮುಂದೆ ಬರಬಹುದು. ಆದರೆ ಒಮ್ಮೆ ಕಳೆದುಕೊಂಡ ನಂಬಿಕೆ, ವಿಶ್ವಾಸ, ಪ್ರೀತಿ ಎಂದಿಗೂ ಮರಳಿ ಪಡೆಯಲು ಸಾಧ್ಯವಿಲ್ಲ. ಜ್ಞಾನದ ಹಸಿವನ್ನು ಇಂಗಿಸಿಕೊಳ್ಳಲು ಅದರ ಹುಡುಕಾಟದಲ್ಲಿ ನಿರಂತರವಾಗಿ ಮುನ್ನಡೆಯುವ ಪ್ರಯತ್ನಗಳು ಸಾಗುತ್ತಿರಬೇಕು. ಆಳವಾದ ಜ್ಞಾನ, ನಿಧಾನವಾದ ನಡತೆ ಮನುಷ್ಯನನ್ನು ಸದಾ ಸಾಧನೆಯೆಡೆಗೆ ಮತ್ತು ಉನ್ನತ ಶಿಖರದೆತ್ತರದಲ್ಲಿ ಕೊಂಡೊಯ್ಯುತ್ತದೆ. ಯಾವ ವ್ಯಕ್ತಿ ತನ್ನ ತಪ್ಪುಗಳನ್ನು ತಿದ್ದಿಕೊಳ್ಳಲು ತಾನಾಗಿಯೇ ಹೋರಾಟ ಮಾಡುವನೋ ಅವನನ್ನು ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲವೆಂಬುದನ್ನು ನೆನಪಿನಲ್ಲಿಟ್ಟು ಕೊಂಡು, ಬೇರೆಯವರ ತಪ್ಪು ಗಳನ್ನೇ ಎತ್ತಿ ತೋರಿಸುವ ಕೆಲಸ ಮಾಡುವುದನ್ನು ಬಿಟ್ಟು, ನಮ್ಮ ತಪ್ಪುಗಳ ಕುರಿತು ಸ್ವ ಅವಲೋಕನ ಮಾಡಿಕೊಳ್ಳುವುದನ್ನು ರೂಢಿಸಿಕೊಳ್ಳೋಣ. ನಮ್ಮನ್ನು ಸದಾ ಕಾಲ ಆಶಾವಾದಿ ಯನ್ನಾಗಿ ಮಾಡುವ ಉನ್ನತವಾದ ಕನಸುಗಳನ್ನು ಕಾಣುವುದನ್ನು ರೂಢಿಸಿಕೊಳ್ಳಬೇಕು. ಆದರೆ ಒಂದು ವಿಷಯ ನೆನಪಿನಲ್ಲಿಟ್ಟುಕೊಳ್ಳಬೇಕು – ಕನಸುಗಳು ಬೇಗನೇ ಅಪ್ ಲೋಡ್ ಆಗುತ್ತವೆ, ಆದರೆ ಅವು ಗಳನ್ನು ಡೌನ್ ಲೋಡ್ ಮಾಡಿಕೊಳ್ಳಲು ಹೋರಾಟ ನಿರಂತರವಾಗಿರಬೇಕು.

ಯಾವಾಗಲೂ ಮಾತನಾಡುವುದೇ ಕೆಲಸವಾಗಬಾರದು; ನಮ್ಮ ಕೆಲಸಗಳು ನಮ್ಮ ಬಗ್ಗೆ ಮಾತನಾಡುವಂತಿರಬೇಕು. ಅಂದರೆ ಧ್ವನಿ ಏರಿಸದೇ ನಮ್ಮ ಪಾಡಿಗೆ ನಾವು ಕೆಲಸ ಮಾಡುತ್ತಿರಬೇಕು. ಏಕೆಂದರೆ ಹೂವಿಗೆ ಜೀವ ತುಂಬುವುದು ಮಳೆಯೇ ಹೊರತು ಗುಡುಗಲ್ಲ. ಪ್ರಪಂಚದಲ್ಲಿ ಯಾವುದೇ ವಸ್ತು ಎಷ್ಟೇ ದುಬಾರಿ ಬೆಲೆ ಆಗಿರಬಹುದು. ಆದರೆ ನಿದ್ರೆ, ನೆಮ್ಮದಿ ಹಾಗೂ ಸಂತೋಷಕ್ಕೆ ಇರುವಷ್ಟು ಬೆಲೆ ಬೇರೆ ಯಾವುದೇ ವಸ್ತುವಿಗೂ ಇರುವುದಿಲ್ಲ. ಅಂದರೆ ಲಕ್ಷಾಂತರ ಹಣ ಕೊಟ್ಟು ನಾವು ಗಾದಿ ಖರೀದಿಸಬಹುದೇ ಹೊರತು ನಿದ್ದೆ , ಸಂತೋಷ, ನೆಮ್ಮದಿಯನ್ನಲ್ಲ. ದುಡ್ಡೇ ಜಗತ್ತಿನಲ್ಲಿ ಎಲ್ಲವೂ ಅಲ್ಲ. ಯಾವ ವ್ಯಕ್ತಿ ಸಂತೋಷ, ನೆಮ್ಮದಿ, ಶಾಂತಿಯಿಂದ ಜೀವನ ಸಾಗಿಸುತ್ತಿರುವನೋ ಅವನೇ ನಿಜವಾದ ಆರೋಗ್ಯ ವಂತ ಹಾಗೂ ಶ್ರೀಮಂತ ವ್ಯಕ್ತಿ ಎಂದು ಹೇಳಬಹುದಾಗಿದೆ. ನಾವು ಗಳಿಸಿದ್ದರಲ್ಲಿ ಸ್ವಲ್ಪ ಹಣವನ್ನು ಹಸಿದ ವರಿಗೆ ಅನ್ನ ನೀಡಲು ಬಳಸಬೇಕು. ಏಕೆಂದರೆ ಹಸಿದವರಿಗೆ ನೀಡಿದ ಅನ್ನ, ಬಯಸಿದವರಿಗೆ ನೀಡಿದ ದಾನ, ಅವಶ್ಯವಿದ್ದವರಿಗೆ ಮಾಡಿದ ಸಹಾಯವು ಸಾವಿನ ನಂತರವೂ ನಮ್ಮನ್ನು ಬದುಕಿಸಬಲ್ಲ ಸಂಜೀವಿನಿಯಾಗಿದೆ ಎಂಬುದನ್ನು ಯಾರೂ ಮರೆಯಬಾರದು. ಚಿಕ್ಕ ಚಿಕ್ಕ ವಿಷಯಗಳಲ್ಲೂ ಖುಷಿ ಕಾಣುವಂತಹ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಜೀವನದಲ್ಲಿ ನಗಲಾರದ ಯಾವುದೇ ದಿನವನ್ನು ವ್ಯರ್ಥವಾಗಿ ಕಳೆಯಬಾರದು. ಮಾತನ್ನು ಹಿತಮಿತವಾಗಿ ಮಾತನಾಡುವುದನ್ನು ಕಲಿಯಬೇಕು. ಏಕೆಂದರೆ ಬದುಕಿನಲ್ಲಿ ಶೇ.99ರಷ್ಟು ಸಮಸ್ಯೆಗಳು ಸೃಷ್ಟಿಯಾಗುವುದು ನಮ್ಮ ಮಾತಿನ ಧ್ವನಿಯಿಂದ ಏನು ಹೇಳುತ್ತೇವೆ ಎನ್ನುವುದಕ್ಕಿಂತಲೂ ಹೇಗೆ ಹೇಳುತ್ತೇವೆ ಎನ್ನುವುದು ತುಂಬಾ ಮುಖ್ಯವಾಗುತ್ತದೆ.

ಭಟ್ಟರ್ ಸ್ಕಾಚ್

- **ದಿನಕರ ಸುಳ್ಯ, ಮಂಗಳೂರು**
ಪಾಕಿಸ್ತಾನವನ್ನೇಕೆ 'ಸಿಕ್ ಕಂಟ್ರಿ' ಅಂತ ಕರೆಯುತ್ತಾರೆ ಭಟ್ರೇ?
- ಕರೋನಾ ಕೂಡ ಅಲ್ಲಿಗೆ ಹೋಗಲು ಹೆದರುತ್ತದೆ!

- **ರಾಜೇಂದ್ರ, ಹೆಗ್ಗಡೆ, ಮೂಡಬಿದರೆ**
ಕರ್ನಾಟಕ ಲಾಕ್ ಡೌನ್ ಎಂದು ಘೋಷಿಸಿದರೂ ಜನರೇಕೆ ಮನೆಯಿಂದ ಹೊರಗೆ ಬರುತ್ತಿದ್ದಾರೆ?
- ತಾವೊಬ್ಬರೇ ಮನೆಯೊಳಗೇ ಇರೋದಾ, ಬೇರೆಯವರೂ ಇದ್ದಾರಾ ಎಂಬುದನ್ನು ಪರೀಕ್ಷಿಸಲು!

- **ಕಾಶಿ ಪರಮೇಶ್ವರ, ತ್ಯಾಗರಾಜನಗರ**
ಕರ್ಫ್ಯೂ ಟೈಮಲ್ಲೂ ಮನೆಯಿಂದ ಹೊರಗೆ ಬರ್ತಾರಲ್ಲ ಭಟ್ರೇ?
- ಕನ್ನಡ ಟಿವಿ ಚಾನೆಲ್ಲುಗಳು ಸರಿಯಾಗಿ ವರದಿ ಮಾಡುತ್ತಿವೆಯಾ, ಇಲ್ಲವಾ ಎಂಬುದನ್ನು ಚೆಕ್ ಮಾಡುವ ಚಪಲ!

- **ಸುಧೀರ ಫಡಕೆ, ಮಲ್ಲೇಶ್ವರ**
ಆರಡಿ ಅಂತರ ಕಾಪಾಡಿಕೊಳ್ಳಿ ಅಂದ್ರೂ ಜನ ಕೇಳುತ್ತಿಲ್ಲವಲ್ಲ?
- ಅಂಥವರಿಗೆ ಭೂಮಿಯಿಂದ ಆರಡಿ ಕೆಳಗೆ ಹೋಗಬೇಕಾಗುತ್ತೆ ಅಂತ ಹೆದರಿಸಿ!

- **ರಾಧಾ ಹಿರೇಮಠ, ಧಾರವಾಡ**
ಕರೋನಾ ಭೀತಿ ಸಂದರ್ಭದಲ್ಲಿ ಕಣ್ಣಿಗೆ ಕಾಣದವರೆಂದರೆ ಯಾರು ಸಾರ್?
- ಮನೆಯಲ್ಲೇ ಉಳಿದು ಮೂವತ್ತು ಸಾವಿರ ಗಳಿಸಿರಿ ಎಂದು ಜಾಹೀರಾತು ನೀಡುವವರು!

- **ದೀಪ್ತಿ ಕೆ.ವಿ., ಸಾರಕ್ಕಿ**
ಭಟ್ರೇ, ಇನ್ನೂ ಹತ್ತು ದಿನ ಮನೆಯಲ್ಲೇ ಕಳೆಯೋದು ಹೇಗೆ?
- ನಿನ್ನ ಗಂಡ ಕೇಳಬೇಕಾದ ಪ್ರಶ್ನೆಯನ್ನು ನೀನು ಕೇಳ್ತಾ ಇದ್ದೀಯಲ್ಲಮ್ಮಾ?!

- **ಸಂದೀಪ ರಾಯಕರ, ಬೆಂಗಳೂರು**
ಎಲ್ಲಿ ಹೋದ್ರೂ ಕರೋನಾನೇ ಕಾಣುತ್ತಿದೆಯಲ್ಲ?
- ಇನ್ನು ಕೆಲವರಿಗೆ ಅವರ ಹೆಂಡತಿ, ಹೆಂಡತಿಯರಿಗೆ ಅವರ ಗಂಡನೇ ಕಾಣುತ್ತಿದ್ದಾನೆ ಗೊತ್ತಾ?!

- **ಪಿ.ಕೆ. ಜನಾರ್ಧನ, ತುಮಕೂರು**
ಸಾರ್, ಏಕಕಾಲದಲ್ಲಿ ಸುಖ – ದುಃಖ ಅಂದರೆ ಯಾವುದು?
- ಕರೋನಾ ಭೀತಿಯಲ್ಲಿ ಮನೆಯಲ್ಲಿಯೇ ಬಂದಿಯಾಗಿರುವುದು!

- **ರಾಜೇಶ ಸುಕಾಳ, ಬೆಳಗಾವಿ**
ಹೆಂಡತಿಯನ್ನು ಹಗ್ ಮಾಡಿದರೆ ಕರೋನಾ ಬರುವುದಂತೆ ನಿಜಾನಾ ಭಟ್ರೇ?
- ಇದು ಗರ್ಲ್ ಫ್ರೆಂಡ್‌ಗಳು ಹಬ್ಬಿಸಿದ ಸುಳ್ಳು ಸುದ್ದಿ!

- **ಸಂಕೇತ ರಾಜಾರಾಮ, ಜೆ.ಪಿ.ನಗರ**
ಕರೋನಾ ಕಾಟದಿಂದ ಮನೆಯಲ್ಲಿ ಉಳಿದು ಮನೆ ಊಟ ಸೇರುತ್ತಿಲ್ಲವಲ್ಲ?
- ಅಜೀರ್ಣವಾದರೂ ಇನ್ನು ಹತ್ತು ದಿನ ಉಣ್ಣಲೇಬೇಕು, ಇಲ್ಲದಿದ್ದರೆ ಮಣ್ಣು ತಿನ್ನಬೇಕಾಗಬಹುದು!

ಅರಿವಿನ ಹೂರಣಕ್ಕೆ ಭಾವಗಳ ಬೆಸೆಯುವ ಯುಗಾದಿ

ಪ್ರಸ್ತುತ
ಶಿವರಂಜಿನಿ ಎಂ.ಆರ್. ಶಿವಣ್ಣ
ncredibleranju@gmail.com

ಕ್ಯಾಲೆಂಡರ್ ಮನುಷ್ಯ ನಿರ್ಮಿತ. ಕಳೆದ ನಾಲ್ಕೈದು ಸಾವಿರ ವರುಷಗಳಲ್ಲಿ ಮಾನವನ ಕ್ಯಾಲೆಂಡರ್ ಬದಲಾಗಿರ ಬಹುದು. ಆದರೆ ಪ್ರಕೃತಿಯ ಕ್ಯಾಲೆಂಡರ್ ಬದಲಾ ಗಿಲ್ಲ. ಪ್ರಕೃತಿಯ ಬದಲಾವಣೆಗಳಿಗೆ ತನ್ನ ಕ್ಯಾಲೆಂಡ ರನ್ನು ಹೊಂದಿಸುವ ಪ್ರಯತ್ನದ ಹಾದಿಯಲ್ಲಿ ಮನುಷ್ಯ ಬಹಳಷ್ಟು ಕಲಿತಿದ್ದಾನೆ. ಪ್ರಕೃತಿಯ ನಿಗೂಢ ಗಳನ್ನು ಅರಿತಿದ್ದಾನೆ. ತನ್ನ ಗಣಿತ, ಖಗೋಳ, ವಿಜ್ಞಾನ ಗಳನ್ನು ಬೆಳೆಸಿದ್ದಾನೆ. 'ದೇವರು ಪೂರ್ಣಾಂಕಗಳನ್ನು ಸೃಷ್ಟಿಸಿದ. ಮಿಕ್ಕಿದೆಲ್ಲವೂ ಮನುಷ್ಯನ ರಚನಾ ಕಾರ್ಯ,' ಎಂಬುದು ಗಣಿತ ತಜ್ಞ ಲೆಯೋಪಾಲ್ಡ್ ಕ್ರೋನೆಕರ್ ಅವರ ಪ್ರಸಿದ್ಧ ಮಾತು. ಆದರೆ ಪ್ರಕೃತಿಯಲ್ಲಿ ನಡೆಯುವ ಬಹಳಷ್ಟು ವಿದ್ಯಾಮಾನಗಳು ಪೂರ್ಣಾಂಕಕ್ಕೆ ಯಾವ ಮಾನ್ಯತೆಯನ್ನೂ ಕೊಡುವುದಿಲ್ಲ.

ಈಗಿನ ವೈಜ್ಞಾನಿಕ ಯುಗದಲ್ಲಿ, ನಾವು ಪ್ರತಿ ವಿಚಾರಕ್ಕೂ ವಿಜ್ಞಾನಾಧಾರಿತ ವಿಶ್ಲೇಷಣೆಯನ್ನ ಬಯಸುತ್ತೇವೆ. ಹಾಗಾದರೆ ಯುಗಾದಿಯ ಆಚರಣೆಗೆ ಕೂಡ ವೈಜ್ಞಾನಿಕ ಕಾರಣವಿದೆಯೇ? ಖಂಡಿತಾ ಇದೆ. ಇದು ಕೇವಲ ಹಬ್ಬವಲ್ಲ. ಭೂಮಿಯ ಜೀವಿಗಳ ಜೀವನಶೈಲಿ ರೂಪಿಸುವ ಆಚರಣೆ ಎಂದರೆ ತಪ್ಪಲ್ಲ.

ಯುಗದ ಆದಿ ಎಂಬ ಎಷ್ಟೊಂದು ಸುಂದರ ಹೆಸರನ್ನು ನಮ್ಮ ಹಿರಿಯರು ನೀಡಿದ್ದಾರೆ. ನಾವು ಮಾಡುವುದೆಲ್ಲವೂ ವೈಜ್ಞಾನಿಕವಾಗಿರಬೇಕು. ಪಾಶ್ಚಾತ್ಯ ಜಗತ್ತಿನಿಂದ ಬಂದದ್ದೆಲ್ಲ ವೈಜ್ಞಾನಿಕ ಎಂಬ ಭ್ರಮೆಯಲ್ಲಿರುವವರ ಅಜ್ಞಾನವನ್ನು ಕಳೆದುಹಾಕುವಷ್ಟು ಅರ್ಥವತ್ತಾದ ವೈಜ್ಞಾನಿಕ ಆಚರಣೆ ಯುಗಾದಿ. ಚೈತ್ರ ಮಾಸದ ಮೊದಲ ದಿನವಾದ ಶುದ್ಧ ಪಾಡ್ಯಮಿ ಯಂದು ಯಾಕೆ ಯುಗಾದಿ ಆಚರಣೆ? ಬೇರೆ ದಿನಗಳಲ್ಲಿ ಯಾಕಿಲ್ಲ?

ಸೂರ್ಯನ ಸುತ್ತ ಭೂಮಿಯ ಪರಿಭ್ರಮಣ, ಭೂಮಿಯ ಸುತ್ತ ಚಂದ್ರನ ಪರಿಭ್ರಮಣ- ಇವು ಯಾವುದೂ ಪೂರ್ಣಾಂಕದಲ್ಲಿಲ್ಲ. ಪ್ರತಿ ಚಾಂದ್ರ ಮಾಸದಲ್ಲೂ ನಿಖರವಾಗಿ 30 ದಿನ, ಪ್ರತಿ ಸೌರ ವರ್ಷಕ್ಕೆ ನಿಖರವಾಗಿ 365 ದಿನ ಎಂದೆಲ್ಲಾ ಇದ್ದರೆ ನಮ್ಮ ಕ್ಯಾಲೆಂಡರ್ ಸರಳವಾಗಿ ಬಿಡುತ್ತಿದ್ದವೇನೋ. ಭೂಮಿ ಸೂರ್ಯನಿಂದ ಪಡೆಯುವ ಬೆಳಕಿನ ಪ್ರಮಾಣ ವರ್ಷ ಪೂರ್ತಿ ಒಂದೇ ರೀತಿಯಲ್ಲಿ ಇರುವುದಿಲ್ಲ. ಜಗತ್ತಿನ ಎಲ್ಲೆಡೆಯ ಪ್ರಾಚೀನರು ಸಾವಿರಾರು ವರ್ಷಗಳ ಹಿಂದೆಯೇ ಗುರುತಿಸಿದ ಹಾಗೆ ವರ್ಷದಲ್ಲೊಂದು ದಿನ ನಮಗೆ ಅತೀ ದೀರ್ಘ ಹಗಲು. ಇನ್ನೊಂದು ದಿನ ಅತೀ ದೀರ್ಘ ಇರುಳು.

ನಮ್ಮ ಈಗಿನ ಕ್ಯಾಲೆಂಡರ್ ಪ್ರಕಾರ ಡಿಸೆಂಬರ್ 21 ಭೂಮಿಯ ಉತ್ತರ ಗೋಳಾರ್ಧಕ್ಕೆ ಅತೀ ದೀರ್ಘ ರಾತ್ರಿ. ಹಾಗೆಯೇ ದಕ್ಷಿಣ ಗೋಳಾರ್ಧಕ್ಕೆ ಅತೀ ದೀರ್ಘ ಹಗಲು. ಆರು ತಿಂಗಳು ಕಳೆದ ನಂತರ ಜೂನ್ 21 ಮತ್ತೆ ಉತ್ತರ ಗೋಳಾರ್ಧಕ್ಕೆ ಅತೀ ದೀರ್ಘ ಹಗಲು, ದಕ್ಷಿಣ ಗೋಳಾರ್ಧಕ್ಕೆ ಅತೀ ದೀರ್ಘ ರಾತ್ರಿ. ಅಂದರೆ ಭೂಮಿಯು ಸೂರ್ಯನಿಂದ ಪಡೆಯುವ ಬೆಳಕಿನ ಪ್ರಮಾಣ ಕಡಿಮೆಯಾಗುತ್ತಾ ಹೋಗಿ ಒಂದು ದಿನ ಕನಿಷ್ಟ ಬಿಂದುವನ್ನು ಮುಟ್ಟಿ ಮತ್ತೆ ಹೆಚ್ಚಾಗುತ್ತಾ ಬಂದು ಮತ್ತೊಂದು ಗರಿಷ್ಟ ಬಿಂದುವನ್ನು ಮುಟ್ಟಿ ಮತ್ತೆ ಕಡಿಮೆಯಾಗುತ್ತಾ ಸಾಗುತ್ತಿರುತ್ತದೆ. ಬಹಳಷ್ಟು ಜನ ತಿಳಿದುಕೊಂಡಿರುವಂತೆ ಇದು ಭೂಮಿ ಸೂರ್ಯನಿಗೆ ದೀರ್ಘ ವೃತ್ತದಲ್ಲಿ ಸುತ್ತು ಬರುತ್ತಾ ಒಮ್ಮೆ ಹತ್ತಿರವೂ ಇನ್ನೊಮ್ಮೆ ದೂರವೂ ಸರಿಯುವುದರಿಂದ ಆಗುವ ಬದಲಾವಣೆಯಲ್ಲ. ಭೂಮಿಯಲ್ಲಿ ಸೂರ್ಯನ ಬೆಳಕಿನ ಪ್ರಮಾಣ ಹೆಚ್ಚು ಕಡಿಮೆ ಆಗೋದಕ್ಕೆ ಮುಖ್ಯ ಕಾರಣ ಅದು ಸೂರ್ಯನ ಅಕ್ಷಕ್ಕೆ 23.44 ಡಿಗ್ರಿ ವಾಲಿ ಕೊಂಡಿರುವುದೇ ಎಂಬುದನ್ನು ನಮ್ಮ ಪ್ರಾಚೀನರು ಗುರುತಿಸಿದ್ದಾರಲ್ಲಾ, ಆ ದಿನಗಳ ಅಂತರವನ್ನು ಲೆಕ್ಕಹಾಕಿ ಅವುಗಳ ನಡುವಿನ ಎಂಟು ದಿನಗಳನ್ನು ಗುರುತಿಸಿ, ಈ ಎರಡು ದಿನಗಳಲ್ಲಿ ಭೂಮಿಯು ಸೂರ್ಯನಿಂದ ಪಡೆಯುವ ಹಗಲು ರಾತ್ರಿಗಳು ಸಮನಾಗಿರುತ್ತವೆ ಎಂದು ಭಾವಿಸಿದರು. ಡಿಸೆಂಬರ್ 21 ಮತ್ತು ಜೂನ್ 21ರ ನಡುವಿನ ಎರಡು ಮಧ್ಯ ಬಿಂದುಗಳು ಮಾರ್ಚ್ 20 ಮತ್ತು ಸೆಪ್ಟೆಂಬರ್ 22 ಆಗುತ್ತವೆ. ಇವನ್ನು ಕ್ರಮವಾಗಿ ವಸಂತ ಋತು (ಯುಗಾದಿ) ಹಾಗೂ ಶರದ ಋತು ಎಂದೂ ಕರೆದರು.

ಈ ಎರಡು ದಿನಗಳಲ್ಲಿ ಉತ್ತರ ಗೋಳಾರ್ಧದಲ್ಲಿ ಹಗಲು ಮತ್ತು ಇರುಳು ಸಮನಾಗಿರುತ್ತವೆ. ಮಾರ್ಚ್ 20ರ ನಂತರ ಹಗಲಿನ ಅವಧಿ ಹೆಚ್ಚುತ್ತಾ ಹೋಗಿ ಜೂನ್ ಹೊತ್ತಿಗೆ ಗರಿಷ್ಟ ಬಿಂದುವನ್ನು ಮುಟ್ಟುತ್ತದೆ. ಹಾಗೆಯೇ ಸೆಪ್ಟೆಂಬರ್ 22ರಂದು ಹಗಲಿರುಳಿನ ಅವಧಿ ಒಂದೇ ಆಗಿ ಅಲ್ಲಿಂದ ಮುಂದಕ್ಕೆ ಇರುಳಿನ ಅವಧಿ ಹೆಚ್ಚುತ್ತಾ ಹೋಗಿ ಡಿಸೆಂಬರ್ 21ರಂದು ಉತ್ತುಂಗವನ್ನ ಮುಟ್ಟುತ್ತದೆ ಎಂಬುದು ಪ್ರಾಚೀನರ ತರ್ಕವಾಗಿತ್ತು. ಅದು ಸರಿಯೂ ಹೌದು. ಇದೇ ಯುಗಾದಿಯ ವೈಜ್ಞಾನಿಕ ಮಹತ್ವ. ಫಾಲ್ಗುಣದಿಂದ ಪ್ರಾರಂಭವಾಗಿ ವೈಶಾಖದ ಮಧ್ಯದವರೆಗೂ ಮುಂದುವರಿಯುವ ಸುದೀರ್ಘ ವಸಂತೋತ್ಸವದ ಪ್ರಮುಖ ದಿನ ಯುಗಾದಿ. ಈ ಎರಡು ತಿಂಗಳ ಕಾಲವೂ ಗೀತ, ನೃತ್ಯ, ಕಾವ್ಯ, ಕ್ರೀಡೆ, ವಿನೋದಗಳಲ್ಲಿ ತೊಡಗುತ್ತಾ ಚಿಗುರು, ಹೂಗಳನ್ನು ಮಾಲೆ ಕಟ್ಟಿ, ಅವುಗಳನ್ನ ಮುಡಿಯುತ್ತಾ, ವನಗಳ ಸುತ್ತಾಟ, ಜಲ ಕ್ರೀಡೆಗಳು, ಉಯ್ಯಾಲೆಯಾಟದಲ್ಲಿ ಸ್ತ್ರೀ ಪುರುಷರು ತೊಡಗುತ್ತಿದ್ದರೆಂಬ ಉಲ್ಲೇಖವು ನಮ್ಮ ಸಂಸ್ಕೃತ ಹಾಗೂ ದೇಶಭಾಷೆಗಳ ಪ್ರಾಚೀನ - ಮಧ್ಯಕಾಲೀನ ಸಾಹಿತ್ಯದಲ್ಲಿ ಹೇರಳವಾಗಿ ಸಿಗುತ್ತವೆ. 'ಉತ್ಸವ ಪ್ರಿಯಾಃ ಖಲುಮಾನವಾಃ' ಎಂದು ಕಾಳಿದಾಸನು ಉದ್ಗರಿಸಿದ್ದು ಅರ್ಥಪೂರ್ಣವೇ ಆಗಿದೆ. ಯುಗಾದಿ ಎಲ್ಲರ ಹಬ್ಬ. ಅದರಲ್ಲೂ ಯುವ ಜನತೆಯನ್ನೇ ವಿಶೇಷವಾಗಿ ತೊಡಗಿಸಿಕೊಂಡ ಹಬ್ಬ.

ಬೆಳಕು ಅಥವಾ ಬಿಸಿಲು ಎಂಬುದು ಜೀವಂತಿಕೆಯ ಲಕ್ಷಣ. ಹಗಲಿನ ಅವಧಿ ಹೆಚ್ಚಾದರೇ ಮರಗಿಡಗಳು ಮೈಮುರಿದು ಎದ್ದೇಳುತ್ತವೆ. ಹೂವು ಅರಳಿಸಿ ಪರಾಗ ಸ್ಪರ್ಶಕ್ಕೆ ಚಿಟ್ಟೆಗಳನ್ನು ದುಂಬಿಗಳನ್ನು ಕರೆಯುತ್ತವೆ. ಹೂವು ಹೀಚಾಗಿ, ಹೀಚು ಕಾಯಾಗಿ, ಕಾಯಿ ಹಣ್ಣಾಗಿ ಹಕ್ಕಿಗಳು ಅವುಗಳನ್ನ ತಿಂದು ಬೀಜ ಪ್ರಸಾರ ಮಾಡಲು ಹಗಲು ದೀರ್ಘವಾಗಿದ್ದರೆ ಉತ್ತಮ. ಅದೇ ಕಾರಣಕ್ಕೆ ಜೀವಕಳೆ ಕಳೆದುಕೊಂಡಿದ್ದ ಮರಗಿಡ ಗಳು ಡಿಸೆಂಬರ್ ನಂತರ ಜೀವಂತಿಕೆ ಪಡೆದು, ಹೂವು ಹಣ್ಣು ಬಿಟ್ಟು ಮೈದುಂಬಿ ನಿಲ್ಲುವುದು ವಸಂತ ಋತುವಿನ ಈ ಕಾಲಾವಧಿಯು ಮಧ್ಯಬಿಂದು. ಆದ್ದರಿಂದ ಸಹಜವಾಗಿಯೇ ಪ್ರಾಮುಖ್ಯತೆ ಪಡೆ ಯಿತು. ಯುಗಾದಿಯ ದಿನ ಹಗಲು ಇರುಳು ಸಮ ನಾಗಿರುತ್ತವೆ. ಇಲ್ಲಿಂದ ಮುಂದಕ್ಕೆ ಬಿಸಿಲು-ಹಗಲು ಹೆಚ್ಚುತ್ತದೆ ಎಂಬ ವಾಸ್ತವಿಕ ನಮ್ಮ ಪೂರ್ವಿಕರಿಗೆ ಬಹಳ ಇಷ್ಟವಾಗಿರಬೇಕು. ಆದ್ದರಿಂದ ವಸಂತ ಋತು ವಿನ ನಂತರ ಬರುವ ಮೊದಲ ಪಾಡ್ಯವನ್ನು ಹಬ್ಬ ವಾಗಿ, ಹೊಸ ವರ್ಷದ ಮೊದಲ ದಿನವಾಗಿ ಆಯ್ದು ಕೊಂಡರು. ಯುಗಾದಿ ಹುಟ್ಟಿದ ಕಥೆಯಿದು.

ಯುಗಾದಿ ಭಾರತೀಯರಿಗೆ ಮಾತ್ರವಲ್ಲ, ಉತ್ತರ ಗೋಳಾರ್ಧದ ಎಲ್ಲಾ ನಾಗರೀಕತೆಗಳ ಜನರಿಗೂ ವರ್ಷಾರಂಭವಾಗಿತ್ತು. ಇಂಕಾ, ಮಾಯನ್ ನಾಗರೀಕತೆಯಿಂದ ಹಿಡಿದು ಈಜಿಪ್ಟ್, ಬ್ಯಾಬಿಲೋನಿಯನ್, ಮೆಸಪಟೋಮಿಯಾ- ಈ ಎಲ್ಲಾ ಜನರಿಗೂ ಅದೇ ಕ್ಯಾಲೆಂಡರಿನ ಮೊದಲ ದಿನ. ಕ್ರಿಸ್ತ ಹುಟ್ಟುವ ಮೊದಲೇ ಗ್ರೀಕ್-ರೋಮನ್ನರ ವರ್ಷಾರಂಭ ಕೂಡ ಯುಗಾದಿಯೇ ಆಗಿತ್ತು.

ಸಂಸ್ಕೃತದಲ್ಲಿ ಯುಗ ಶಬ್ದವು ದೀರ್ಘಕಾಲವನ್ನು ತಿಳಿಸುವ ಶಬ್ದವೂ ಆಗಿದೆ. ನಮ್ಮಲ್ಲಿ ನಾಲ್ಕು ಯುಗಗಳು ಪ್ರಸಿದ್ಧವಾಗಿವೆ. ಈ ಕಾಲವಾಚಕವೂ ಯುಗ ಶಬ್ದವಾಗಿದೆ. ಅಲ್ಪಕಾಲಾವಕಾಶವೂ ಯುಗ ಶಬ್ದ. ಪ್ರಕೃತಿಯಲ್ಲಿ ಯುಗ ಶಬ್ದಕ್ಕೆ ಚಂದ್ರಮಾನ ವರ್ಷವೆಂದರ್ಥ. ಇಂತಹ ಒಂದು ವರ್ಷಾತ್ಮಕ ಕಾಲದ ಆದಿಯನ್ನು ಅರ್ಥಾತ್ ಆರಂಭದ ದಿನವನ್ನು ಯುಗಾದಿ ಎಂದು ಕರೆಯುತ್ತೇವೆ. ನಮ್ಮಲ್ಲಿ ನಾವು ಇನ್ನಾವುದಕ್ಕೂ ನೀಡದ ಬೆಲೆಯನ್ನು ಕಾಲಕ್ಕೆ ನೀಡಿದ್ದೇವೆ.

ಸೃಷ್ಟಿ ಶಾಶ್ವತವಾದುದ್ದು. 1,84,000 ಜೀವಜಂತುಗಳಿಗೆ ಆಶ್ರಯ ನೀಡಿದೆ. ಅದರಲ್ಲಿ ಮನುಷ್ಯ ಒಂದು ಭಾಗ ಎಂಬುದನ್ನು ತಿಳಿಸುವುದೇ ಯುಗಾದಿ. ಮನುಷ್ಯರಲ್ಲಿ ಮಾತ್ರ ಒಳಿತು, ಕೆಡಕು, ಸ್ವಹಿತೆ, ಪರಹಿತ, ಸಂಸ್ಕೃತಿ, ವಿಕೃತಿ, ಹೃದಯ, ಬುದ್ಧಿ, ಮನಸ್ಸು, ಮಾತಾಡುವ ಶಕ್ತಿ, ಆತ್ಮೋದ್ಧಾರದ ಚಿಂತನೆ ಇದೆ. ಮನುಷ್ಯ ಮಾತ್ರ ಪ್ರಕೃತಿಯ ರಕ್ಷಣೆ ಮತ್ತು ಲೋಕ ಕಲ್ಯಾಣದ ವಿಚಾರ ಮಾಡಬಲ್ಲ. ಮಾಡಬೇಕೆಂಬುದು ಯುಗಾದಿಯಿಂದ ಆರಂಭವಾಗುವ ಹೊಸ ಸಂವತ್ಸರದ ಸಂದೇಶವಾಗಿದೆ. ಲಂಕಾ ವಿಜಯ, ಶ್ರೀರಾಮನ ಪಟ್ಟಾಭಿಷೇಕದ ದಿನ, ಭಗವಾನ ಝುಲೇಲಾಲರು ಅಂದು ನಾಡಿನ ರಕ್ಷಣೆಗಾಗಿ ನಡೆಸಿದ ಹೋರಾಟದ ನೆನಪಿನಲ್ಲಿ ಶಾಲಿವಾಹನ ಶಕೆ ಮತ್ತು ವಿಕ್ರಮ ಶಕೆಗಳ ಆರಂಭದ ಐತಿಹಾಸಿಕ ದಿನ ಯುಗಾದಿ. ಮಹರ್ಷಿ ದಯಾನಂದ ಸರಸ್ವತಿ, ಡಾ. ಕೇಶವ ಬಲಿರಾಮ್ ಹೆಡಗೇವಾರರ ಜನ್ಮದಿನವೂ ಯುಗಾದಿ. ಕಲಿಯುಗದ ಆರಂಭವೂ ಯುಗಾದಿ.

ವೇದಗಳ ಕಾಲದಿಂದಲೂ ಅತ್ಯಂತ ಪ್ರಶಸ್ತವೂ, ಪ್ರಸಿದ್ಧವೂ ಆದ ಹಬ್ಬ ಯುಗಾದಿ. ಇದನ್ನು ಅರ್ಥಪೂರ್ಣವಾಗಿ ಆಚರಿಸಿಕೊಂಡು ಬರಲಾಗಿದೆ. ವಸಂತ ಋತುವಿನಲ್ಲಿ ಬರುವ ಯುಗಾದಿಯು ದೇಹಕ್ಕೂ ಮನಸ್ಸಿಗೂ ಮುದವನ್ನು ನೀಡುತ್ತದೆ. ಕೊರೆಯುವ ಚಳಿಯಿಲ್ಲ, ಬಿರುಬಿಸಿಲಿನ ಝಳವೂ ಇಲ್ಲ, ಮಳೆಯ ಕಸಿವಿಸಿಯೂ ಇಲ್ಲದ ಕಾಲ ಇದು. ಶುಭ್ರ ಆಕಾಶ, ವನರಾಶಿಯ ಹೂವು ಹಣ್ಣು ತಳಿರುಗಳು ನಳನಳಿಸುವ ಕಾಲ. ಪಶು ಪಕ್ಷಿ, ಮಾನವ ಸಂಕುಲದಲ್ಲಿ ಮನ್ಮಥನು ವಿಜೃಂಭಿಸಿ, ಸಂಕುಲವನ್ನು ಹೆಚ್ಚಿಸುವ ಪ್ರಕ್ರಿಯೆಯಲ್ಲಿ ತೊಡಗಿರುತ್ತಾನೆ. ಎಲ್ಲೆಲ್ಲೂ ಶುಕಪಿಕಗಳ ಕೂಜನ. ಎಲ್ಲೆಲ್ಲೂ ನವಪಲ್ಲವಗಳು ಅರಳುತ್ತಾ ಭೂಮಿಯ ಮೇಲೆಲ್ಲಾ ಪರಾಗ ಚೆಲ್ಲುವ ಕಾಲವಿದು. ಹೀಗೆ ಅದೆಷ್ಟೇ ಹಳೆಯದಾದರೂ ಅಷ್ಟೇ ನಿತ್ಯ ನೂತನವನ್ನು ಹೊಂದಿರುವ ಹಬ್ಬ ಈ ಯುಗಾದಿ. ವರ್ಷಾರಂಭ ವನ್ನೂ ವರ್ಷಾಂತ್ಯವನ್ನೂ ಶುಭ ವಸಂತಮಾಸದಲ್ಲೇ ಆಚರಿಸುವ ನಮ್ಮ ಪೂರ್ವಜರದ್ದು ಅದೆಷ್ಟು ಸಕಾರಾ ತ್ಮಕ ಭಾವ...!

ಪ್ರಕೃತಿ ವಿಕೋಪ, ಜಾಗತೀಕ ತಾಪಮಾನಗಳು ನಮ್ಮ ಪರಿಸರ ಹಾಳು ಮಾಡಿ ಅಸಲು ವಾತಾವರಣವನ್ನು ಹಾಳು ಮಾಡಿರಬಹುದು. ಇನ್ನೂ ಈ ಬಾರಿ ಕರೋನ, ಭಯೋತ್ಪಾದನೆ, ಪ್ರಕೃತಿ ವಿಕೋಪ- ಇವುಗಳು ಜನರನ್ನು ನಡುಗಿಸಿರಬಹುದು. ಎಲರು ನೋವು – ದುಃಖ – ದುಗುಡಗಳನ್ನೇ ಹೊತ್ತು ನಮ್ಮ ಮುಂದೆ ನರ್ತಿಸುತ್ತಿರಬಹುದು. ಆದರೂ ಮತ್ತೊಂದು ಯುಗಾದಿಯನ್ನು ನಾವೀಗ ಸ್ವಾಗತಿಸಲು ಸಿದ್ಧರಾಗಬೇಕಿದೆ. ಸುರಕ್ಷಿತವಾಗಿ.